

ನೋಡಿಕೊಳ್ಳುವುದರಲ್ಲಿ ಪಾಲಿಲ್ಲವೇ? ಒಬ್ಬರ ಮೇಲೇ ಹೊಣೆ ಹೊರಿಸುವುದು ಅದೆಷ್ಟು ಸರಿ? ಅವರವರ ಹೊಣೆಗಾರಿಕೆಯನ್ನು ಕಳಚಿಟ್ಟು ಹಣದ ಮೂಲಕ ಋಣ ಸಂದಾಯಮಾಡಲು ಪ್ರಯತ್ನಿಸುವುದು ತಪ್ಪಲ್ಲವೇ? ದೀರ್ಘಾಯುಸ್ಸು ಹೊಂದಿರುವುದೇ ಒಂದು ಶಾಪವಾಗಿದೆಯೇ? ಪಾಪ ಅತ್ತೆ. ತುಂಬಾ ವಯಸ್ಸಾಗಿ ಅಷ್ಟಾಗಿ ಬುದ್ಧಿ ಸ್ಥಿಮಿತದಲ್ಲಿಲ್ಲದ ಅವರನ್ನು ವೃದ್ಧಾಶ್ರಮಕ್ಕೆ ಸೇರಿಸಿದರೆ ಹಣಕ್ಕಾಗಿ ದುಡಿಯುವ ಅಲ್ಲಿನ ಪರಿಚಾರಕರು ಅಂತಃಕರಣದಿಂದ ವ್ಯವಹರಿಸುವರೆಂದು ಖಾತ್ರಿ ಏನು? ಒಂದು ದಿನವೆಲ್ಲಾ ಇದರ ಬಗ್ಗೆ ಆಲೋಚಿಸಿ ತಾನೊಂದು ನಿರ್ಧಾರಕ್ಕೆ ಬಂದಳು. ''ನಾನತ್ತೇನ ಯಾವ ವೃದ್ಧಾಶ್ರಮಕ್ಕೂ ಕಳ್ಸೊಲ್ಲ. ಕಷ್ಟವೋ ನಷ್ಟವೋ. ನಾವೇ ನೋಡಿಕೊಳ್ಳೋಣ. ಆಗೊಲ್ಲ ಅನ್ನುವವರ ಬಳಿ ಕಳಿಸೋದು ಬೇಡ'' ಎಂದಳು ನಿರ್ಧಾರದ ಧ್ವನಿಯಲ್ಲಿ.

★★★

ಅಂದು ಭಾನುವಾರ. ತಡವಾಗಿ ಎದ್ದ ವಾಣಿ ಅತ್ತೆಗೆ ಮುಖತೊಳೆಸಲು ಅವರ ಕೋಣೆಗೆ ಹೋದಳು. ಒಂದೆರಡು ಬಾರಿ ಕರೆದು ಉತ್ತರ ಬರದಾಗ ಭುಜಹಿಡಿದು ಅಲುಗಿಸಿದಳು. ಆಗಲೂ ಪ್ರತಿಕ್ರಿಯೆ ಇರಲಿಲ್ಲ. ಗಂಟಲಿನಿಂದ ಗೊರ ಗೊರ ಶಬ್ದ ಬರುತ್ತಿತ್ತು. ಉಸಿರಾಡಲು ಶ್ರಮ ಪಡುವಂತಿತ್ತು. ಹರಿಯೂ ಬಂದು ಎಬ್ಬಿಸಲು ನೋಡಿದ. ''ವಾಣಿ, ಅಮ್ಮ ಇವತ್ತು ಸರಿಯಾಗಿಲ್ಲ ಅನ್ಸತ್ತೆ. ಈಗೇನ್ಮಾಡೋಣ?''

''ಮಾಡೋದೇನು? ಮೊದ್ಲು ಅಪ್ಪಣ್ಣನ್ನು ಕರೀರಿ.''

ಅಪ್ಪಣ್ಣ ಇವರ ಔಟ್‌ಹೌಸ್ ನಿವಾಸಿ. ಒಂಟಿಬಡಕ. ಹೇಳಿಕೊಳ್ಳುವಂತಹ ಉದ್ಯೋಗ ಇಲ್ಲದವ. ಅಲ್ಲಲ್ಲಿ ಚಿಕ್ಕಪುಟ್ಟ ಕೆಲಸ ಮಾಡಿಕೊಡುತ್ತಾ ಸಿಗುತ್ತಿದ್ದ ಪುಡಿಗಾಸಿನಲ್ಲಿ ಜೀವನ ಸಾಗಿಸುತ್ತಿದ್ದ. ಇವರಿಗೆಂದೂ ಬಾಡಿಗೆ ಕೊಡುವ ಗೋಜಿಗೇ ಹೋಗದೆ ಮನೆಯವರ ಕಷ್ಟಸುಖದಲ್ಲಿ ನೆರವಾಗುತ್ತಾ ಮನೆಯ ಮಗನಂತೆಯೇ ಇದ್ದುಬಿಟ್ಟಿದ್ದ. ವಾಣಿಯ ಕರೆ ಕೇಳಿ ಓಡಿಬಂದವ ಬಹಳ ತಿಳಿದವನಂತೆ ನಾಡಿ ಪರೀಕ್ಷಿಸಿ ತಲೆಯಲ್ಲಾಡಿಸಿದ.

''ಹರಿಯಣ್ಣ. ಇದು ಬಹಳ ಸೀರಿಯಸ್ ಕೇಸ್ ಅನ್ಸತ್ತೆ. ಹೋದ್ವಾರ ಆ ದಿನಸೀ ಅಂಗಡಿ